# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **188**

ಸದಸ್ಯರ ಹೆಸರು : ಶ್ರೀ ಎನ್ ರವಿಕುಮಾರ್ (ವಿಧಾನಸಭಾ ಕ್ಷೇತ್ರ)

ಉತ್ತರಿಸುವ ದಿನಾಂಕ : **09-12-2025**

ಉತ್ತರಿಸುವ ಸಚಿವರು : ಮಾನ್ಯ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ವಲಯ ಉದ್ದಿಮೆಗಳ ಸಚಿವರು

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| (ಅ) | ಕೇಂದ್ರ ಸರ್ಕಾರದ ಒಂದು ಜಿಲ್ಲೆ, ಒಂದು ಉತ್ಪನ್ನ ಯೋಜನೆಗೆ ರಾಜ್ಯ ಸರ್ಕಾರವು ಯಾವ ರೀತಿಯ ಕ್ರಮಗಳನ್ನು ಕೈಗೊಂಡಿದೆ: (ವಿವರ ನೀಡುವುದು) | ಭಾರತ ಸರ್ಕಾರವು "ಆತ್ಮ ನಿರ್ಭರ ಭಾರತ" ಕಾರ್ಯಕ್ರಮವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2021-22ನೇ ಸಾಲಿನಿಂದ "ಒಂದು ಜಿಲ್ಲೆ ಒಂದು ಉತ್ಪನ್ನ (One District One Product (ODOP))" ಎಂಬ ಯೋಜನೆಯನ್ನು ಜಾರಿಗೊಳಿಸಿದೆ. ಇದೇ ಮಾದರಿಯಲ್ಲಿ ರಾಜ್ಯ ಸರ್ಕಾರವು "ಒಂದು ಜಿಲ್ಲೆ ಒಂದು ಉತ್ಪನ್ನ" ರಡಿ ರಾಜ್ಯದ ವಿವಿಧ ಜಿಲ್ಲೆಗಳ ಸ್ಥಳೀಯ ಸಾಂಪ್ರದಾಯಿಕ ಕೃಷಿಯೇತರ ಎಂ.ಎಸ್.ಎಂ.ಇ ಉತ್ಪನ್ನಗಳಿಗೆ ವಿಶೇಷ ಪ್ರೋತ್ಸಾಹ ಮತ್ತು ಬ್ರಾಂಡಿಂಗ್ ನೆರವು ಒದಗಿಸಲು ಸರ್ಕಾರಿ ಆದೇಶ ಸಂಖ್ಯೆ: ಸಿಐ 127 ಸಪ್ರಕೈ 2022 (ಭಾಗ-4), ದಿನಾಂಕ: 22-02-2023ಅನ್ನು ಹೊರಡಿಸಿದೆ **(ಅನುಬಂಧ-1)** |
| (ಆ) | ಈ ಯೋಜನೆಯ ಅನ್ವಯ ಎಷ್ಟು ಜಿಲ್ಲೆಗಳಲ್ಲಿ ಉತ್ಪನ್ನಗಳನ್ನು ಗುರುತಿಸಲಾಗಿದೆ: ಮತ್ತು ಅವು ಯಾವುವು: (ಜಿಲ್ಲಾವಾರು ವಿವರ ನೀಡುವುದು) | ಈ ಯೋಜನೆಯ ಅನ್ವಯ 31 ಜಿಲ್ಲೆಗಳಲ್ಲಿ ಉತ್ಪನ್ನಗಳನ್ನು ಗುರುತಿಸಲಾಗಿದೆ: ಜಿಲ್ಲಾವಾರು ವಿವರವನ್ನು **(ಅನುಬಂಧ-1) ರಲ್ಲಿ** ಲಗತ್ತಿಸಿದೆ |
| (ಇ) | ಈ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಸರ್ಕಾರವು ಯಾವ ರೀತಿಯ ಪ್ರೋತ್ಸಾಹ ನೀಡುತ್ತದೆ: ತೆರಿಗೆ ವಿನಾಯಿತಿ ಹಾಗೂ ಇತರ ರಿಯಾಯತಿಗಳ ವಿವರ ನೀಡುವುದು: | ➢ ಈ ಯೋಜನೆಯನ್ನು ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ ಹಾಲಿ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳ ಸಂಯೋಜನೆಯೊಂದಿಗೆ ಕ್ಲಸ್ಟರ್ ಅಭಿವೃದ್ಧಿ ಕಾರ್ಯಕ್ರಮಗಳು, ಹೊಸ ವಿನ್ಯಾಸ, ತರಬೇತಿ, ತಂತ್ರಜ್ಞಾನ ಅಳವಡಿಕೆ, ಜಾಗೃತಿ ಶಿಬಿರಗಳು, ಗುಣಮಟ್ಟ ಸುಧಾರಣೆ, ಉತ್ಪಾದನೆ ಹೆಚ್ಚಳ, Product Catalogue, ಉಡುಗೊರೆ, ಮಾರುಕಟ್ಟೆ ಸೌಲಭ್ಯ, ಇ-ಕಾಮರ್ಸ್, ಪಾರಂಪರಿಕ ಉತ್ಪನ್ನಗಳ ಕುಶಲಕರ್ಮಿಗಳಿಗೆ ಪ್ರೋತ್ಸಾಹ/ತರಬೇತಿ ಹಾಗೂ ಇನ್ನಿತರೇ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>➢ ಎಲ್ಲಾ ಸಂಬಂಧಪಟ್ಟ ಇಲಾಖೆ/ನಿಗಮ/ಮಂಡಳಿಗಳು ತಮ್ಮ ಕಾರ್ಯಕ್ರಮಗಳನ್ನು ಈ ಯೋಜನೆಯಲ್ಲಿ ಸಂಯೋಜನೆ ಮಾಡಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ. |

<table>
<tr>
<td></td>
<td></td>
<td>ODOP ಕಾರ್ಯಕ್ರಮದ ಅನುಷ್ಠಾನ ಕುರಿತಂತೆ ಭಾರತ ಸರ್ಕಾರದೊಂದಿಗೆ ಸಮನ್ವಯ ಸಾಧಿಸಿ RAMP ಯೋಜನೆಯಡಿ ಇರುವ ಸೌಲಭ್ಯ ಬಳಸಿಕೊಂಡು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ.</td>
</tr>
<tr>
<td>(ಈ)</td>
<td>ಕಲ್ಯಾಣ ಕರ್ನಾಟಕ, ಉತ್ತರ ಕರ್ನಾಟಕ ಭಾಗದ ಪ್ರತಿಯೊಂದು ಜಿಲ್ಲೆಯಲ್ಲಿ ಗುರುತಿಸಲಾದ ಉತ್ಪನ್ನಗಳು ಯಾವುವು? (ವಿವರ ನೀಡುವುದು)</td>
<td>ಕಲ್ಯಾಣ ಕರ್ನಾಟಕ, ಉತ್ತರ ಕರ್ನಾಟಕ ಭಾಗದ ಪ್ರತಿಯೊಂದು ಜಿಲ್ಲೆಯಲ್ಲಿ ಗುರುತಿಸಲಾದ ಉತ್ಪನ್ನಗಳ ಪಟ್ಟಿ ಈ ಕೆಳಕಂಡಂತಿವೆ:
<table>
<tr><th>ಕ್ರಸಂ</th><th>ಜಿಲ್ಲೆ</th><th>ಉತ್ಪನ್ನಗಳು</th></tr>
<tr><td>1</td><td>ಬೀದರ್</td><td>ಬಿದರಿಕಲೆ</td></tr>
<tr><td>2</td><td>ಕಲಬುರಗಿ</td><td>ಶಹಾಬಾದ್ ಕಲ್ಲುಗಳು</td></tr>
<tr><td>3</td><td>ಯಾದಗಿರಿ</td><td>ಹತ್ತಿ ಮತ್ತು ಹತ್ತಿ ಆಧಾರಿತ ಉತ್ಪನ್ನಗಳು</td></tr>
<tr><td>4</td><td>ರಾಯಚೂರು</td><td>ಹತ್ತಿ ಮತ್ತು ಹತ್ತಿ ಆಧಾರಿತ ಉತ್ಪನ್ನಗಳು</td></tr>
<tr><td>5</td><td>ಕೊಪ್ಪಳ</td><td>ಗೊಂಬೆ ತಯಾರಿಕೆ</td></tr>
<tr><td>6</td><td>ಬಳ್ಳಾರಿ</td><td>ಬಳ್ಳಾರಿ ಡೆನಿಂ ಜೀನ್ಸ್</td></tr>
<tr><td>7</td><td>ವಿಜಯನಗರ</td><td>ಸಂಡೂರು ಲಂಬಾಣಿ ಕಸೂತಿ</td></tr>
<tr><td>8</td><td>ಹಾವೇರಿ.</td><td>ಮಸಾಲೆ ಪದಾರ್ಥಗಳು</td></tr>
<tr><td>9</td><td>ಬಾಗಲಕೋಟೆ</td><td>ಇಳಕಲ್ ಸೀರೆಗಳು</td></tr>
<tr><td>10</td><td>ಬೆಳಗಾವಿ</td><td>ಫೌಂಡ್ರಿ</td></tr>
<tr><td>11</td><td>ವಿಜಯಪುರ</td><td>ವ್ಯವಸಾಯ ಸಾಮಗ್ರಿಗಳು</td></tr>
<tr><td>12</td><td>ಧಾರವಾಡ</td><td>ವಾಲ್ವ್ ಉತ್ಪಾದನೆ (VALVE MANUFACTURING)</td></tr>
<tr><td>13</td><td>ಗದಗ</td><td>ಜವಳಿ</td></tr>
</table>
</td>
</tr>
</table>

**ಸಿಐ 156 ಎಸ್‌ಎಸ್‌ಐ 2025**

(ಶರಣಬಸಪ್ಪ ದರ್ಶನಾಪೂರ)
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ
ಉದ್ದಿಮೆಗಳ ಸಚಿವರು.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಜ್ಯದಲ್ಲಿ ಕೃಷಿಯೇತರ ಉತ್ಪನ್ನಗಳನ್ನು ಹೆಚ್ಚು ಪ್ರಚುರ ಪಡಿಸುವ ನಿಟ್ಟಿನಲ್ಲಿ "ಒಂದು ಜಿಲ್ಲೆಗೆ ಒಂದು ಉತ್ಪನ್ನ (One District One Product (ODOP))" ಯೋಜನೆಯಡಿ ODOP ಉತ್ಪನ್ನಗಳನ್ನು ಅಂತಿಮಗೊಳಿಸುವ ಕುರಿತು.

**ಓದಲಾಗಿದೆ:**

1. ಸರ್ಕಾರದ ಕಾರ್ಯದರ್ಶಿ (ಎಂ.ಎಸ್.ಎಂ.ಇ & ಗಣಿ) ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ರವರ ಅಧ್ಯಕ್ಷತೆಯಲ್ಲಿ ಸಭೆಯ ನಡವಳಿಗಳ ದಿನಾಂಕ: 29.08.2022.
2. ಸರ್ಕಾರಿ ಆದೇಶ ಸಂಖ್ಯೆ: ಸಿಐ 127 ಸಪ್ರಕೈ 2022, ಬೆಂಗಳೂರು, ದಿನಾಂಕ: 08.09.2022.
3. ಸರ್ಕಾರದ ಕಾರ್ಯದರ್ಶಿ (ಎಂ.ಎಸ್.ಎಂ.ಇ ಮತ್ತು ಗಣಿ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ VC ಸಭೆಯ ದಿನಾಂಕ: 16.01.2023.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ದಿನಾಂಕ:21.01.2023.
5. ಇ-ಆಫೀಸ್ ಕಡತ ಸಂಖ್ಯೆ: CI 127 SSI 2022 (ಭಾ-4) ರಲ್ಲಿನ ಮಾನ್ಯ ಮುಖ್ಯಮಂತ್ರಿಯವರ ಟಿಪ್ಪಣಿ ದಿನಾಂಕ: 30.01.2023.

*****

**ಪ್ರಸ್ತಾವನೆ:**

ಭಾರತ ಸರ್ಕಾರವು "ಆತ್ಮ ನಿರ್ಭರ ಭಾರತ" ಕಾರ್ಯಕ್ರಮವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2021-22 ಸಾಲಿನಿಂದ "ಒಂದು ಜಿಲ್ಲೆ ಒಂದು ಉತ್ಪನ್ನ (One District One Product (ODOP))" ಎಂಬ ಯೋಜನೆಯನ್ನು ಜಾರಿಗೊಳಿಸುತ್ತಿದೆ. ಇದೇ ಮಾದರಿಯಲ್ಲಿ ರಾಜ್ಯ ಸರ್ಕಾರವು ಸರ್ಕಾರದ ವತಿಯಿಂದ "ಒಂದು ಜಿಲ್ಲೆ ಒಂದು ಉತ್ಪನ್ನ" ರಡಿ ರಾಜ್ಯದ ವಿವಿಧ ಜಿಲ್ಲೆಗಳ ಸ್ಥಳೀಯ ಸಾಂಪ್ರದಾಯಿಕ ಕೃಷಿಯೇತರ ಎಂ.ಎಸ್.ಎಂ.ಇ ಉತ್ಪನ್ನಗಳಿಗೆ ವಿಶೇಷ ಪ್ರೋತ್ಸಾಹ ಮತ್ತು ಬ್ರಾಂಡಿಂಗ್ ನೆರವು ಒದಗಿಸಲು ತೀರ್ಮಾನಿಸಿದ್ದು, ಇದರಿಂದ ಸ್ಥಳೀಯ ಆರ್ಥಿಕತೆಗೆ ಉತ್ತೇಜನ ದೊರಕುವುದರೊಂದಿಗೆ ಉದ್ಯೋಗಾವಕಾಶ ಸೃಷ್ಟಿಯಾಗಲಿದೆ.

ಮೇಲೆ ಓದಲಾದ ಕ್ರಮಾಂಕ (1) ರ ದಿನಾಂಕ:29.08.2022 ರಂದು ಸರ್ಕಾರದ ಕಾರ್ಯದರ್ಶಿ (ಎಂ.ಎಸ್.ಎಂ.ಇ & ಗಣಿ) ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ರವರ ಅಧ್ಯಕ್ಷತೆಯಲ್ಲಿ "ಒಂದು ಜಿಲ್ಲೆ ಒಂದು ಉತ್ಪನ್ನ (One District One Product(ODOP))" ಯೋಜನೆಯನ್ನು ಎಂ.ಎಸ್.ಎಂ.ಇ ವಲಯಕ್ಕೆ ಸಂಬಂಧಿಸಿದಂತೆ ಅನುಷ್ಠಾನಗೊಳಿಸುವ ಕುರಿತಂತೆ ನಡೆದ ಸಭೆಯಲ್ಲಿ ಚರ್ಚಿಸಿದಂತೆ, ಒಂದು ಜಿಲ್ಲೆಗೆ ಒಂದು ಉತ್ಪನ್ನ (ODOP) ಮಾದರಿಯಲ್ಲಿ ಕೃಷಿಯೇತರ ಉತ್ಪನ್ನಗಳನ್ನು ಹೆಚ್ಚು ಪ್ರಚುರ ಪಡಿಸುವ ನಿಟ್ಟಿನಲ್ಲಿ ಸೂಕ್ತ ರೂಪುರೇಷಗಳನ್ನು ಸಿದ್ಧಪಡಿಸಿ ಜಾರಿಗೊಳಿಸಲು ಸರ್ಕಾರಿ ಆದೇಶ ಸಂಖ್ಯೆ: ಸಿಐ 127 ಸಪ್ರಕೈ 2022, ಬೆಂಗಳೂರು, ದಿನಾಂಕ: 08.09.2022 ರ ಮೂಲಕ ನಿರ್ದೇಶಕರು (ಎಂ.ಎಸ್.ಎಂ.ಇ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿ ಆದೇಶಿಸಲಾಗಿರುತ್ತದೆ.



File No. C I/127/SSI/2022-SSI-C&I SEC-Part(4) (Computer No. 967361)
Generated from eOffice by Harsha S, C&I-Asst2(HS), ASSISTANT, COMMERCE AND INDUSTRIES SECRETARIAT on 03/12/2025 04:09 PM

ಮೇಲೆ ಓದಲಾದ ಕ್ರಮಾಂಕ (2) ರ ದಿನಾಂಕ: 16.01.2023 ರಂದು ಸರ್ಕಾರದ ಕಾರ್ಯದರ್ಶಿ (ಎಂ.ಎಸ್.ಎಂ.ಇ ಮತ್ತು ಗಣಿ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ "Stakeholders Consultation for finalizing non-agri ODOP Product" ಕುರಿತಂತೆ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ನಡೆದ VC ಸಭೆಯಲ್ಲಿ (One District One Product (ODOP))" ಯೋಜನೆಯಡಿ ಗುರುತಿಸಬಹುದಾದ ಎಂ.ಎಸ್.ಎಂ.ಇ ವಲಯದ ಉತ್ಪನ್ನಗಳ ಕುರಿತಂತೆ ವಿಸ್ತೃತವಾಗಿ ಚರ್ಚಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (3) ರ ದಿನಾಂಕ:16.01.2023 ರಂದು ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ ,ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ (One District One Product(ODOP))" ಯೋಜನೆಯಡಿ ಎಂ.ಎಸ್.ಎಂ.ಇ ವಲಯಕ್ಕೆ ಸಂಬಂಧಿಸಿದಂತೆ ಪ್ರತಿ ಜಿಲ್ಲೆಗೆ ಒಂದು ಉತ್ಪನ್ನವನ್ನು ಗುರುತಿಸಿ ಕರಡು ಪಟ್ಟಿಯನ್ನು ಮಾನ್ಯ ಮುಖ್ಯಮಂತ್ರಿಯವರ ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (4) ರ ಮಾನ್ಯ ಮುಖ್ಯಮಂತ್ರಿಯವರ ಟಿಪ್ಪಣಿಯಲ್ಲಿ ಪರಿಷ್ಕೃತಗೊಳಿಸಲಾದ ODOP ಪಟ್ಟಿಗೆ ತಾತ್ವಿಕ ಅನುಮೋದನೆ ನೀಡಲಾಗಿರುತ್ತದೆ.

ಆದುದರಿಂದ ಈ ಆದೇಶ,

**<u>ಸರ್ಕಾರಿ ಆದೇಶ ಸಂಖ್ಯೆ: ಸಿಐ 127 ಸಪ್ರಕೈ 2022(ಭಾ-4), ಬೆಂಗಳೂರು, ದಿನಾಂಕ:22.02.2023</u>**

ಈ ಮೇಲಿನ ಪ್ರಸ್ತಾವನೆಗಳಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, "ಒಂದು ಜಿಲ್ಲೆ ಒಂದು ಉತ್ಪನ್ನ (ODOP)" ಮಾದರಿಯಲ್ಲಿ ಕೃಷಿಯೇತರ ಉತ್ಪನ್ನಗಳನ್ನು ಹೆಚ್ಚು ಪ್ರಚುರ ಪಡಿಸುವ ನಿಟ್ಟಿನಲ್ಲಿ ರಾಜ್ಯದಲ್ಲಿ ಈ ಕೆಳಗಿನ ಕೃಷಿಯೇತರ ಉತ್ಪನ್ನಗಳನ್ನು "ಒಂದು ಜಿಲ್ಲೆಗೆ ಒಂದು ಉತ್ಪನ್ನ" ಎಂದು ಗುರುತಿಸಿ ಅನುಮೋದನೆ ನೀಡಲಾಗಿದೆ:

| ಕ್ರಮ ಸಂಖ್ಯೆ | ಜಿಲ್ಲೆ | ಉತ್ಪನ್ನ |
|---|---|---|
| 1 | ಉಡುಪಿ | ರತ್ನಗಳು ಮತ್ತು ಆಭರಣ ತಯಾರಿಕೆ |
| 2 | ಮೈಸೂರು | ರೋಸ್ ವುಡ್ ಕೆತ್ತನೆ |
| 3 | ಬೀದರ್ | ಬಿದರಿ ಕಲೆ |
| 4 | ವಿಜಯಪುರ | ವ್ಯವಸಾಯ ಸಾಮಗ್ರಿಗಳು(Agricultural Implements) |
| 5 | ಬಾಗಲಕೋಟೆ | ಇಳಕಲ್ ಸೀರೆ |
| 6 | ದಾವಣಗೆರೆ | ಹತ್ತಿ ಆಧಾರಿತ Ginning ಮತ್ತು ಸಿದ್ಧ ಉಡುಪು ತಯಾರಿಕೆ |
| 7 | ತುಮಕೂರು | ತೆಂಗಿನ ನಾರಿನ ಕೈಗಾರಿಕೆಗಳು |
| 8 | ಹಾವೇರಿ | ಮಸಾಲೆ ಪದಾರ್ಥಗಳು(Spice Products) |
| 9 | ಚಾಮರಾಜನಗರ | ಕಲ್ಲಿನ ಕೆತ್ತನೆ (Stone Work) |
| 10 | ಚಿಕ್ಕಬಳ್ಳಾಪುರ | ಸಿದ್ಧಘಟ್ಟ ರೇಷ್ಮೆ ಮತ್ತು ಕಚ್ಚಾ ರೇಷ್ಮೆ ಆಧಾರಿತ ಸೀರೆಗಳು |

4. ಆಯುಕ್ತರು, ಕೈಗಾರಿಕಾಭಿವೃದ್ಧಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-01.
5. ನಿರ್ದೇಶಕರು (ಎಂ.ಎಸ್.ಎಂ.ಇ.), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-01.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ, ಕೆಎಸ್ಎಸ್ಐಡಿಸಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-10.
7. ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರ (VTPC), ವಿ.ಐ.ಟಿ.ಸಿ. ಕಟ್ಟಡ ಕಸ್ತೂರ ಬಾ ರಸ್ತೆ, ಬೆಂಗಳೂರು-01.
8. ವ್ಯವಸ್ಥಾಪಕ ನಿರ್ದೇಶಕರು,ಕರ್ನಾಟಕ ತಾಂತ್ರಿಕ ಉನ್ನತೀಕರಣ ಪರಿಷತ್ತು (KCTU)ರಾಜಾಜಿನಗರ ಕೈಗಾರಿಕಾ ವಸಾಹತು, ವೆಸ್ಟ್ ಆಫ್ ಕಾರ್ಡ್ ರೋಡ್, ಬೆಂಗಳೂರು-10.
9. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ನಂ.10, ಖಾದಿ ಭವನ, ಜಸ್ಮಾ ಭವನ ರಸ್ತೆ, ಬೆಂಗಳೂರು-52.
10. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ, ಸಂ.45, ಕೆ.ಎಸ್.ಹೆಚ್.ಡಿ.ಸಿ ಕಾಂಪ್ಲೆಕ್ಸ್, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01
11. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ, ನಂ.953/ಎ, 2ನೇ ಮೈನ್, 4ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-140.
12. ವ್ಯವಸ್ಥಾಪಕ ನಿರ್ದೇಶಕರುಆಹಾರ ಕರ್ನಾಟಕ ನಿಯಮಿತನಂ.17, ಜನರಲ್ ಕೆ.ಎಸ್.ತಿಮ್ಮಯ್ಯ ರಸ್ತೆ,ರಿಚ್ ಮಂಡ್ ರಸ್ತೆ, ಬೆಂಗಳೂರು.
13. ಅಪರ ನಿರ್ದೇಶಕರು (ಆಡಳಿತ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-1.
14. ಅಪರ ನಿರ್ದೇಶಕರು (ಎಂ.ಎಸ್.ಎಂ.ಇ & ಪಿಪಿ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-1.
15. ಅಪರ ನಿರ್ದೇಶಕರು (ಜಿಕೈಕೇ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-1.
16. ಜಂಟಿ ನಿರ್ದೇಶಕರು (ಯೋಜನೆ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-01.
17. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು-01.
18. ಉಪ ನಿರ್ದೇಶಕರು, TNMC, ವಾಣಿಜ್ಯ ತೆರಿಗೆ ಕಛೇರಿ, ಗಾಂಧಿ ನಗರ, ಬೆಂಗಳೂರು-01.
19. ಆಂತರಿಕ ಆರ್ಥಿಕ ಸಲಹೆಗಾರರು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
20. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸ ಸೌಧ, ಬೆಂಗಳೂರು-01.
21. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-01.
22. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, (ಎಂ.ಎಸ್.ಎಂ.ಇ. & ಗಣಿ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸ ಸೌಧ, ಬೆಂಗಳೂರು-01.
23. M/s Primuspartners, 91 Springboard Business Hub 175 & 176, Bannerghatta Main Rd, Dollars Colony, Bengaluru, Karnataka 560076.
24. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

| | | |
|---|---|---|
| 11 | ಚಿತ್ರದುರ್ಗ | ಮೊಳಕಾಲ್ಮೂರು ಸೀರೆಗಳು |
| 12 | ಕೋಲಾರ | ಶಿವಾರಪಟ್ಟಣ ಕಲ್ಲು ಕೆತ್ತನೆ |
| 13 | ಬಳ್ಳಾರಿ | ಬಳ್ಳಾರಿ ಡೆನಿಮ್ ಜೀನ್ಸ್ |
| 14 | ಶಿವಮೊಗ್ಗ | ಸಿದ್ಧ ಉಡುಪು ತಯಾರಿಕೆ |
| 15 | ಕೊಡಗು | ಮನೆಯಲ್ಲಿ ತಯಾರಿಸಿದ ಚಾಕೋಲೇಟ್/ವೈನ್ಸ್ |
| 16 | ಉತ್ತರ ಕನ್ನಡ | ಆಯುರ್ವೇಧ ಔಷಧ ಉತ್ಪನ್ನಗಳು |
| 17 | ಬೆಳಗಾವಿ | ಫೌಂಡ್ರಿ |
| 18 | ಹಾಸನ | ಜಕಾರ್ಡ್ ಬೆಡ್ ಶೀಟ್ |
| 19 | ಬೆಂಗಳೂರು ಗ್ರಾಮಾಂತರ | ಸಿದ್ಧ ಉಡುಪು ತಯಾರಿಕೆ |
| 20 | ಧಾರವಾಡ | ವಾಲ್ವ್ ಉತ್ಪಾದನೆ |
| 21 | ರಾಮನಗರ | ಚನ್ನಪಟ್ಟಣ ಗೊಂಬೆ ತಯಾರಿಕೆ |
| 22 | ಯಾದಗಿರಿ | ಹತ್ತಿ ಮತ್ತು ಹತ್ತಿ ಆಧಾರಿತ ಉತ್ಪನ್ನಗಳು |
| 23 | ಚಿಕ್ಕಮಗಳೂರು | ಅಡಿಕೆ ಎಲೆ ಆಧಾರಿತ ಉತ್ಪನ್ನಗಳು (ತಟ್ಟೆ, ಲೋಟ ಇತ್ಯಾದಿ) |
| 24 | ಕಲಬುರಗಿ | ಶಹಾಬಾದ್ ಕಲ್ಲುಗಳು |
| 25 | ಕೊಪ್ಪಳ | ಕಿನ್ನಾಳ ಗೊಂಬೆ ತಯಾರಿಕೆ |
| 26 | ರಾಯಚೂರು | ಹತ್ತಿ ಮತ್ತು ಹತ್ತಿ ಆಧಾರಿತ ಉತ್ಪನ್ನಗಳು |
| 27 | ದಕ್ಷಿಣ ಕನ್ನಡ | ಜವಳಿ ಸಂಸ್ಕರಣೆ |
| 28 | ಬೆಂಗಳೂರು ನಗರ | ಕೈಮಗ್ಗ ಆಧಾರಿತ ರೇಷ್ಮೆ ಸೀರೆ |
| 29 | ಗದಗ | ಜವಳಿ |
| 30 | ಮಂಡ್ಯ | ಅಕ್ಕಿ ಆಧಾರಿತ ಉತ್ಪನ್ನಗಳು |
| 31 | ವಿಜಯನಗರ | ಸಂಡೂರು ಲಂಬಾಣಿ ಕಸೂತಿ |

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ,**

**(ದೀಪಾ ಲೋಕರೆ)** 22/2/23
**ಪೀಠಾಧಿಕಾರಿ**
**ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ(ಸಪ್ರಕೈ)**

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ' ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
2. ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ' ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
3. ಪ್ರಧಾನ ಮಹಾಲೇಖಪಾಲರು (ಎ & ಇ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ' ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.